ಜಿಲ್ಲಾ ಸಹಕಾರಿ ಬ್ಯಾಂಕ್ ನೌಕರರ ಕಾರ್ಯ ನಿರ್ವಹಣೆ

3003 - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರ ಬ್ಯಾಂಕುಗಳ ನೌಕರರ ವರ್ಗಾವಣೆ ಪ್ರಸ್ತಾಪ ಪರಿಗಣಿಸಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಸಂಸ್ಥೆಗಳ ನೌಕರರು ಬಹಳ ವರ್ಷಗಳ ಕಾಲದಿಂದ ಒಂದೇ ಕಡೆ ಇರುವುದರಿಂದ ಸಂಸ್ಥೆಯ ಬೆಳೆವಣಿಗೆ ಕುಂಠಿತವಾಗಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಈ ನೌಕರರನ್ನು ಜಿಲ್ಲಾವಾರು ಹಾಗೂ ಬೆಂಗಳೂರಿಗೆ ವರ್ಗಾವಣೆ ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಚಾಮರಾಜನಗರ ಊರಕೆರೆಯನ್ನು ನಾಶ ಮಾಡಿ ನಿವೇಶನ ಮಾಡಿರುವುದು

3004 - ಶ್ರೀ ಗುರುಸ್ವಾಮಿ ಸಿ. (ಚಾಮರಾಜ ನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಾಮರಾಜನಗರ ಊರಕೆರೆಯನ್ನು ನಾಶ ಮಾಡಿ ಆ ಜಾಗದಲ್ಲಿ ಸೈಟುಗಳನ್ನಾಗಿ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯಾ?*

ಆ) *ಸದರಿ ಕೆರೆಯನ್ನು ನಾಶ ಮಾಡಿ ಸೈಟುಗಳನ್ನಾಗಿ ಪರಿವರ್ತಿಸಲು ಖರ್ಚಾಗಿರುವ ಹಣವೆಷ್ಟು? ಆ ಕೆಲಸವನ್ನು ಮಾಡಿದವರು ಯಾರು?*

ಇ) *ಆ ಸೈಟುಗಳನ್ನು ಯಾರಿಗೆ ಹಂಚಲಾಗಿದೆ? (ವಿವರ ನೀಡುವುದು)*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹೌದು.

ಆ) ರೂ. 2.50 ಲಕ್ಷಗಳು.

ಇಂಜಿನಿಯರಿಂಗ್ ವಿಭಾಗ ಜಿಲ್ಲಾ ಪಂಚಾಯತ್, ಚಾಮರಾಜನಗರ ಉಪ ವಿಭಾಗ

ಇ) ಈ ನಿವೇಶನಗಳನ್ನು ಯಾರಿಗೂ ಹಂಚಿರುವುದಿಲ್ಲ.

ಗೃಹ ಮಂಡಳಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾವಲುಗಾರರನ್ನು ನೇಮಿಸಿಕೊಂಡಿರುವುದು

3005 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯಲ್ಲಿ ಕಾವಲುಗಾರರು ಇದ್ದರೂ ಸಹ ಖಾಸಗಿ ಸೆಕ್ಯೂರಿಟಿ ಏಜನ್ಸಿಗಳಿಂದ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವುದು ನಿಜವೇ? ವಿವರ ನೀಡುವುದು?

ಆ) ಯಾವ್ಯಾವ ಸಂಸ್ಥೆಗಳಿಂದ ಎಷ್ಟು ಜನ ಸೆಕ್ಯೂರಿಟಿ ಗಾರ್ಡ್‌ಗಳನ್ನು ಎಷ್ಟು ವೆಚ್ಚದಲ್ಲಿ ನೇಮಿಸಿಕೊಳ್ಳಲಾಗಿದೆ?

ಇ) ಈ ಏಜೆನ್ಸಿಗಳು ಕೇವಲ ಕೈಬೆರಳೆಣಿಕೆಯಷ್ಟು? ಕಾವಲುಗಾರರನ್ನು ನೇಮಿಸಿ ಹೆಚ್ಚು ಕಾವಲುಗಾರರ ಲೆಕ್ಕ ತೋರಿಸಿ ಮಂಡಳಿಯಿಂದ ಹೆಚ್ಚು ಹಣ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯ ಕಾವಲುಗಾರರ ಸೇವೆಯನ್ನು ಮಂಡಳಿ ಕಛೇರಿ ಕಾವಲು ಕಾಯುವ ಕೆಲಸಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಕರ್ನಾಟಕ ಗೃಹ ಮಂಡಳಿಗೆ ಸಂಬಂಧಿಸಿದ ಕಾಲೋನಿ, ಮನೆಗಳು ಮತ್ತು ಮಹಡಿ ಮನೆಗಳನ್ನು ಕಾವಲು ಕಾಯುವ ಸಲುವಾಗಿ ಸೆಕ್ಯೂರಿಟಿ ಏಜೆನ್ಸಿಗಳನ್ನು ಗುತ್ತಿಗೆ ಆಧಾರದ ಮೇಲೆ ಮಂಡಳಿಯು ನೇಮಿಸಲಾಗಿದೆ.

ಆ) ರಾಜ್ಯಾದ್ಯಂತ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಕ ಮಾಡಿರುವ ಪಟ್ಟಿ, ಸೆಕ್ಯೂರಿಟಿ ಸಂಸ್ಥೆಯ ಹೆಸರು ಮತ್ತು ಇದಕ್ಕೆ ತಗುಲಿದ ವೆಚ್ಚ, ಇವುಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲ.